# ಕರ್ನಾಟಕ ಸರ್ಕಾರ

ಸಂಖ್ಯೆ: ಇಎನ್ 64 ವಿಎಸ್‌ಸಿ 2018

ಕರ್ನಾಟಕ ಸರ್ಕಾರದ ಸಚಿವಾಲಯ
ಬೆಂಗಳೂರು, ದಿನಾಂಕ:06-03-2018

## ತಿದ್ದುಪಡಿ ಆದೇಶ

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವತಿಯಿಂದ ಸೌರಶಕ್ತಿ ಆಧಾರಿತ ಜಾಲಮುಕ್ತ ನೀರಾವರಿ ಪಂಪ್‌ಸೆಟ್‌ಗಳನ್ನು ಒದಗಿಸುವ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ:ಇಎನ್ 54 ವಿಎಸ್‌ಸಿ 2014 ದಿನಾಂಕ:28.02.2015ರ ಅನುಬಂಧದ ಕಂಡಿಕೆ 1ರ ಮೊದಲನೇ ಸಾಲಿನಲ್ಲಿರುವ "ಹೊಸದಾಗಿ ಸಂಪರ್ಕಗಳನ್ನು ಹೊಂದುವ ರೈತರಿಗೆ ಮಾತ್ರ ಲಭ್ಯವಾಗುತ್ತದೆ" ಎಂಬುದರ ಬದಲಾಗಿ "ಹೊಸದಾಗಿ ವಿದ್ಯುತ್ ಸಂಪರ್ಕ ಹೊಂದುವ ಮತ್ತು ಹಾಲಿ ವಿದ್ಯುತ್ ಸಂಪರ್ಕದಲ್ಲಿರುವ ಪಂಪ್‌ಸೆಟ್ ಸ್ಥಾವರಗಳ ರೈತರಿಗೂ ಅನ್ವಯವಾಗುತ್ತದೆ. ಸೌರ ಪಂಪ್‌ಸೆಟ್ ಚಾಲನೆಗೊಳಿಸುವ ಮೊದಲು ವಿದ್ಯುತ್ ಸರಬರಾಜು ಕಂಪನಿಯು ಹಾಲಿ ಇರುವ ವಿದ್ಯುತ್ ಸಂಪರ್ಕವನ್ನು ಶಾಶ್ವತವಾಗಿ ಕಡಿತಗೊಳಿಸಿ, ಸ್ಥಾವರಕ್ಕೆ ಗ್ರಿಡ್ ಸಂಪರ್ಕವಿಲ್ಲವೆಂದು ದೃಢೀಕರಿಸುವುದು ಹಾಗೂ ಹೊಸ ಸಂಪರ್ಕಕ್ಕೆ ಅರ್ಜಿ ಸಲ್ಲಿಸುವ ಫಲಾನುಭವಿಗಳ ಸ್ಥಾವರಕ್ಕೆ ಗ್ರಿಡ್ ಸಂಪರ್ಕವಿಲ್ಲವೆಂದು ದೃಢೀಕರಿಸುವುದು." ಎಂದು ತಿದ್ದಿ ಓದಿಕೊಳ್ಳುವುದು.

ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ:ಇಎನ್ 17 ವಿಎಸ್‌ಸಿ 2017 ದಿನಾಂಕ:23.11.2017ರ ಅನುಬಂಧದ ಕಂಡಿಕೆ 3 ಅಂಶ 6 ರ ಮೂರನೇ ಸಾಲಿನಲ್ಲಿರುವ "ಈಗಾಗಲೇ ವಿದ್ಯುತ್ ಸಂಪರ್ಕ ಪಡೆದ ಮತ್ತು ಆರ್‌ಆರ್ ಸಂಖ್ಯೆಯನ್ನು ಹೊಂದಿರುವ ಸ್ಥಾವರಗಳನ್ನು ಪರಿಗಣಿಸುವಂತಿಲ್ಲ." ಎಂಬುದರ ಬದಲಾಗಿ "ಹೊಸದಾಗಿ ವಿದ್ಯುತ್ ಸಂಪರ್ಕ ಹೊಂದುವ ಮತ್ತು ಹಾಲಿ ವಿದ್ಯುತ್ ಸಂಪರ್ಕದಲ್ಲಿರುವ ಪಂಪ್‌ಸೆಟ್ ಸ್ಥಾವರಗಳ ರೈತರಿಗೂ ಅನ್ವಯವಾಗುತ್ತದೆ. ಸೌರ ಪಂಪ್‌ಸೆಟ್ ಚಾಲನೆಗೊಳಿಸುವ ಮೊದಲು ವಿದ್ಯುತ್ ಸರಬರಾಜು ಕಂಪನಿಯು ಹಾಲಿ ಇರುವ ವಿದ್ಯುತ್ ಸಂಪರ್ಕವನ್ನು ಶಾಶ್ವತವಾಗಿ ಕಡಿತಗೊಳಿಸಿ, ಸ್ಥಾವರಕ್ಕೆ ಗ್ರಿಡ್ ಸಂಪರ್ಕವಿಲ್ಲವೆಂದು ದೃಢೀಕರಿಸುವುದು." ಎಂದು ತಿದ್ದಿ ಓದಿಕೊಳ್ಳುವುದು ಹಾಗೂ ಸದರಿ ಆದೇಶದ ಕಂಡಿಕೆ 3 ಅಂಶ 7 ರಲ್ಲಿರುವ "ಆಯ್ಕೆ ಮಾಡಿದ ಫಲಾನುಭವಿಗಳ ಸ್ಥಾವರಕ್ಕೆ ಗ್ರಿಡ್ ಸಂಪರ್ಕವಿಲ್ಲವೆಂದು ದೃಢೀಕರಿಸುವುದು." ಎಂಬುದರ ಬದಲಾಗಿ "ಹೊಸದಾಗಿ ವಿದ್ಯುತ್ ಸಂಪರ್ಕಕ್ಕೆ ಅರ್ಜಿ ಸಲ್ಲಿಸುವ ಫಲಾನುಭವಿಗಳ ಸ್ಥಾವರಕ್ಕೆ ಗ್ರಿಡ್ ಸಂಪರ್ಕವಿಲ್ಲವೆಂದು ದೃಢೀಕರಿಸುವುದು." ಎಂದು ತಿದ್ದಿ ಓದಿಕೊಳ್ಳುವುದು

ಉಳಿದಂತೆ ಸದರಿ ಆದೇಶಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

(ಬಿ.ವಿ. ಶ್ರೀನಿವಾಸಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ: 22034674.

ಇವರಿಗೆ,
ಸಂಕಲನಕಾರರು, ಸರ್ಕಾರಿ ಮುದ್ರಣಾಲಯ, ಕರ್ನಾಟಕ ರಾಜ್ಯ ಪತ್ರ ಪ್ರಕಟಣೆಗಾಗಿ.

ಪ್ರತಿ:-

1. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ ನಿ., ಕಾವೇರಿ ಭವನ, ಬೆಂಗಳೂರು-560 009.
6. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ, ಸೆಸ್ಕ್, ಮೆಸ್ಕಾಂ, ಹೆಸ್ಕಾಂ, ಜೆಸ್ಕಾಂ.
7. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, #39, ಶಾಂತಿ ಗೃಹ, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಕಟ್ಟಡ, ಅರಮನೆ ರಸ್ತೆ, ಬೆಂಗಳೂರು-01.
8. ನಿರ್ದೇಶಕರು (ಆರ್ಥಿಕ)/ಅಪರ ನಿರ್ದೇಶಕರು (ತಾಂತ್ರಿಕ)/ಜಂಟಿ ನಿರ್ದೇಶಕರು(ಎನ್‌ಸಿಇ)/ ಜಂಟಿ ನಿರ್ದೇಶಕರು(ಯೋಜನೆ), ಇಂಧನ ಇಲಾಖೆ, ವಿಕಾಸಸೌಧ, ಬೆಂಗಳೂರು.
9. ಮಾನ್ಯ ಇಂಧನ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
10. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
11. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಇಂಧನ ಇಲಾಖೆ.
12. ಸರ್ಕಾರದ ಅಧೀನ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಇಂಧನ ಇಲಾಖೆ.
13. ಶಾಖಾ ರಕ್ಷಾ ಕಡತ/ಕಛೇರಿ ಪ್ರತಿ/ ಹೆಚ್ಚುವರಿ ಪ್ರತಿಗಳು.